183

ಮೈಸೂರ ಗಿಜೆಟ್.

ಸಂ. XXXI.] ಸರಕಾರದಿಂದ ಪ್ರಾಯಿಷ್ ಆದ್ದು [ನಂ. 10.

ಬೆಂಗಳೂರು, ಗುರುವಾರ, ಮಾರ್ಚಿ ತಾ॥ 12, ಸ॥ 1896.

ವಿಷಯ ಸೂಚಿಕೆ.

1ನೇ ಭಾಗ—ಮೈಸೂರು ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

2ನೇ ಭಾಗ—ರಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಟಿಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಅಫಿಸರ್‌ಗಳು, ಫಾರೆಸ್ಟ್ರು, ರೆಜಿಸ್ಟ್ರೇರ್ಸ ವ ಯಡ್ಮಿನಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು, ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೋಲೀಸ್ ಸೂಪರ್ಟಿಂಡೆಂಟರು, ಫಾರೆಸ್ಟ್ರು ಆಫಿಸರ್‌ಗಳ ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫಿಸ್ ನೋಟಿಸ್‌ಗಳು.

3ನೇ ಭಾಗ—ಮೈಸೂರ್ ಸರ್ಕಾರದಿಂದ ಮಂಜೂರ್ಮಾಡಲ್ಪಟ್ಟ ಕ್ಕುಗಳು ವ ರೆಗ್ಯುಲೇಷ್ಟಗಳು.—ಇಲ್ಲ.

4ನೇ ಭಾಗ—ಸರ್ಕಾರಿ ಕಾಗದ ಪತ್ರಗಳು.—ಇಲ್ಲ.

ಈ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

1ನೇ ಭಾಗ.

ಮೈಸೂರ್ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 4ನೇ ಫಿಬ್ರವರಿ 1896.

ನಂ. 8979.—ಲೋ. ಫಂ. 257.—92.—1894ನೇ ಇಸವಿ VIIನೇ ನಂಬರ್ ಲ್ಯಾಂಡ್ ಅಕ್ವಿಜೆಷ್ಟ್. ರೆಗ್ಯುಲೇಷನಿನ 6ನೆ ಸೆಕ್ಷನ್ ನಿಯಮಗಳನುಸರಿಸಿ, ಇದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ವಿವರಿಸಲ್ಪಟ್ಟ ಜಮೀನು ಸರ್ಕಾರ್ ಕೆಲಸಕ್ಕೆ ಅಂದರೆ ಕಡೂರು ಗ್ರಾಮದಲ್ಲಿ ಮಾದಿಗರಹಟ್ಟಿಯನ್ನು ಕಟ್ಟುವಬಗ್ಯಾಗಿ ಬೇಕಾಗಿರುತ್ತೆ:—

ಡಿಸ್ಟ್ರಿಕ್ಟು—ಕಡೂರು, ತಾಲ್ಲೂಕು—ಕಡೂರು, ಗ್ರಾಮ—ಕಡೂರು, ಖಾತೇದಾರನ ಹೆಸರು—ಚವ್ಡಾ.

ಜಮೀನಿನ ತಪ್ಸೀಲ್.

ಸರ್ವೇ ನಂಬರ್—ಪೈಕಿ 73; ವಿಸ್ತೀರ್ಣ—ಖುಷ್ಕಿ 5 ಎಕರೆ 8 ಗುಂಟೆ, ಕಂದಾಯ—ರೂ. 4—12—0.

ಚಕ್ಕುಬಂದಿ.

ಪೂರ್ವಕ್ಕೆ—ಸರ್ವೇ ನಂಬರ್ 74, ದೇವಯ್ಯನ ಭೂಮಿ.
ಪಶ್ಚಿಮಕ್ಕೆ—ಡಿಟೋ 72, ಲಕ್ಕನ ಭೂಮಿ.
ಉತ್ತರಕ್ಕೆ—ಸರ್ವೇ ನಂ. 69, ಹನುಮನ ಭೂಮಿ.
ದಕ್ಷಿಣಕ್ಕೆ—ಡಿಟೋ 73, ಪೈಕಿ ತಿಮ್ಮನ ಭೂಮಿ.

ತಾರೀಖು 6ನೇ ಮಾರ್ಚಿ 1896.

ನಂ. 10242.—ಜು. 1116.—ಇದರಡಿ ಬರುವ ಮ್ಯುನಿಸಿಫರುಗಳ ವರ್ಗಾವರ್ಗಿಗಳು, ಚಾಲತೀ ವರುಷದ ಮೋಕಳೀ ಕಾಲ ಆದ ನಂತರ ಕೋರ್ಟುಗಳು ಪುನಹ ತೆಗಿಯುವ ತಾರೀಖು ಲಾಗಾಯತು ಅಂದರೆ, 1896ನೇ ಇಸವಿ ಮೇ 20ನೇ ತಾರೀಖಿನಾ ರಜ್ಯ ಜಾರೀಲಿ ಬರತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತ್ತೆ.

ಮ್ಯುನಿಸಿಫರ ಹೆಸರು.	ಎಲ್ಲಿಂದ.	ಎಲ್ಲಿಗೆ.
ಮೆಸ್ಸರ್ ಪಿ. ಆನಂದರಾಯರು	ಚಿತ್ರದುರ್ಗ	ಚಿಕ್ಕಬಳ್ಳಾಪುರ
,, ಬಿ. ವೆಂಕಟಾಚಾರ್ರು	ಚಿಕ್ಕಬಳ್ಳಾಪುರ	ಕೋಲಾರ
,, ಯಸ್. ವರದರಾಜಯ್ಯಂಗಾರ್ರು	ಕೋಲಾರ ...	ಚಿತ್ರದುರ್ಗ

ತಾರೀಖು 7ನೇ ಮಾರ್ಚಿ 1896.

ನಂ. 10273.—ಜು. 1122.—ಸ್ಪೆಷಲ್ ಸಬ್ ರಿಜಿಸ್ಟ್ರಾರುಗಳ ಇದರಡಿ ಬರುವ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತೆ:—

(1) 3ನೇ ಗ್ರೇಡಿನ ಸಬ್ ರಿಜಿಸ್ಟ್ರಾರ್ ಹೆಚ್. ರಾಮಣ್ಣನವರು—ಅರಕಲ್‌ಗೂಡಿನಿಂದ ಕೃಷ್ಣರಾಜಪೇಟೆಗೆ.

(2) 3ನೇ ಗ್ರೇಡಿನ ಸಬ್ ರಿಜಿಸ್ಟ್ರಾರ್ ಬಿ. ಕೃಷ್ಣರಾಯರು,—ಕೃಷ್ಣರಾಜಪೇಟೆಯಿಂದ ಅರಕಲ್‌ಗೂಡಿಗೆ.

ತಾರೀಖು 10ನೇ ಮಾರ್ಚಿ 1896.

ನಂ. 10363.—ಜು. 1135.—ಚಿಕ್ಕಮಗಳೂರು ಮ್ಯುನಿಸಿಫ್ ಮೆಸ್ಸರ್ ಬಿ. ಶ್ರೀನಿವಾಸರಾಯರು, 1896ನೇ ಇಸವಿ ಫಿಬ್ರವರಿ 8ನೇ ಮತ್ತು ನಂ. 9199.—ಜು. 998ನೇ ನಂಬರ್ ಇಸ್ತಿಹಾರ್‌ನಾಮೆ ಮೂಲಕ ಅವರಿಗೆ ಕೊಡಲ್ಪಟ್ಟ 15 ದಿವಸಗಳ ರಜಾ ಪೈಕಿ 3 ದಿವಸಗಳು ಮಾತ್ರ ಉಪಯೋಗಿಸಿಕೊಂಡಿರುತ್ತಾರಾಗಿ ಪುಳದ ಭಾಗದ ರಜಾ ಅಂದರೆ 12 ದಿವಸಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ನಂ. 10386.—ಮಿ. 1441.—ಮೈಸೂರ್ ಸರ್ವಿಸ್ ರೆಗ್ಯುಲೇಷ್ಗಳ 171ನೇ ಆರ್ಟಿಕಲ್ ಅನುಸರಿಸಿ ಗವರ್ನ್‌ಮೆಂಟಿನ ಅಸಿಸ್ಟೆಂಟ್ ಸೆಕ್ರೆಟರಿ ಮತ್ತು ದಿವಾನರವರ ಪ್ರೈವೇಟ್ ಸೆಕ್ರೆಟರಿಯವರಾದ ಮೆಸ್ಸರ್ ಸಿ. ಶ್ರೀಕಂಠೇಶ್ವರ ಅಯ್ಯರವರಿಗೆ, 1896ನೇ ಇಸವಿ ಮಾರ್ಚಿ 9ನೇ ಮತ್ತು ಲಾಗಾಯತು 3 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 10387.—1439.—ಮೈಸೂರ್ ಸರ್ವಿಸ್ ರೆಗ್ಯುಲೇಷ್ 171ನೇ ಆರ್ಟಿಕಲ್ ಅನುಸರಿಸಿ, ಗವರ್ನ್‌ಮೆಂಟ್ ಆಫೀಸರ್, ಸೆಕ್ರೆಟರಿಯವರಾದ ಮೆಸ್ಸರ್ ಟಿ. ಪರಮಶಿವಯ್ಯರ್ ಯವರಿಗೆ, 1896ನೇ ಇಸವಿ ಮಾರ್ಚಿ 4ನೇ ಮತ್ತು ಲಾಗಾಯತು 4 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 11ನೇ ಮಾರ್ಚಿ 1896.

ನಂ. 10424.—ಮಿಸ. 1454.—ಇದರಿಂದ ಪ್ರಕಟಪಡಿಸುವದೇನಂದರೆ, 1883ನೇ ಇಸವಿ ಸೆಪ್ಟಂಬರ್ 14ನೇ ಮತ್ತು 234ನೇ ನಂಬರ್ ಇಸ್ತಿಹಾರ್‌ನಾಮೆಯಿಂದ ತಿದ್ದುಪಡಿ ಆದಂತೆ 1881ನೇ ಇಸವಿ ಮೇ 17ನೇ ಮತ್ತು 56ನೇ ನಂಬರ್ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್‌ಮಾಡಲ್ಪಟ್ಟ ಷೆಡ್ಯೂಲ್‌ನಲ್ಲಿ ವಿವರಿಸಲ್ಪಟ್ಟ ಜಮೀನುಗಳಲ್ಲದೆ ಇದರಡಿ ಕಂಡ ಷೆಡ್ಯೂಲ್‌ನಲ್ಲಿ ಹದ್ದು ಗೊತ್ತು ಮಾಡಲ್ಪಟ್ಟು ವಿವರಿಸಲ್ಪಟ್ಟ ಜಮೀನುಗಳನ್ನು ಘನವನ್ನು ಹೊಂದಿದ ಶ್ರೀಮಂ. ಮಹಾರಾಣೀ ರೀಜಂಟರವರು ಬ್ರಿಟಿಷ್ ಸರ್ಕಾರದ ಉಪ್ಪು ಆಡಳತಕ್ಕೆ ಒಪ್ಪಿಸಿರುತ್ತಾರೆ, ಮತ್ತು ಹಾಂಗೆ ಒಪ್ಪಿಸಲ್ಪಟ್ಟ ಜಮೀನುಗಳ ಮೇಲಿನ ತಮಾಂ ಅಧಿಕಾರಗಳನ್ನು ಈ ತಾರೀಖು ಲಾಗಾಯತು ಬಿಟ್ಟುಬಿಟ್ಟಿರುತ್ತಾರೆ.

ಷೆಡ್ಯೂಲ್.

ಕೋರಮಂಗಲ ಗ್ರಾಮದ ಸರ್ವೇ ನಂಬರ್ 57 ವ 58 ಮತ್ತು ಈಜೀಪುರ ಗ್ರಾಮದ ಸರ್ವೇ ನಂಬರ್ 52, 53 ವ 54 ಮತ್ತು ಇದರ ದಕ್ಷಿಣ ದಿಕ್ಕಿನಲ್ಲಿರುವ ನೀಲಸಂದ್ರ ಅಗರದ ರಸ್ತೆ.—ಬೆಳ್ಳಂದೂರು ಉತ್ತರಕ್ಕೆ—ಸೋಮೇನಹಳ್ಳಿ ಗ್ರಾಮದ ಹೊಲದ ಸರಹದ್ದುಗಳು, ದಕ್ಷಿಣಕ್ಕೆ—ಕೋರಮಂಗಲ ಮತ್ತು ಈಜೀಪುರ ಗ್ರಾಮಗಳ ಹೊಲಗಳ ಸರಹದ್ದುಗಳು, ಪೂರ್ವಕ್ಕೆ—ಆರ್ಟಿಲೆರಿಯ ಕವಾಯತು ಭೂಮಿ, ಪಶ್ಚಿಮಕ್ಕೆ—ಸೋಮೇನಹಳ್ಳಿ ಗ್ರಾಮದ ಹೊಲದ ಸರಹದ್ದುಗಳು.

ತಾರೀಖು 2ನೇ ಮಾರ್ಚಿ 1896.

ನಂ. 7798.—ಫಾ. ಫೈ. 127—95.—1890ನೇ ಇಸವಿ ಫಿಬ್ರವರಿ 28ನೇ ಮಕ್ಕುಂ 362ನೇ ನಂಬರುಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ, ಇದರಿಂದ ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಪಡಿಸುವದೇನಂದರೆ, ಉಬ್ರಾಣಿ ಮತ್ತು ಚನ್ನಗಿರಿ ಡಿಪೋಗಳಲ್ಲಿ ಅವ್ವಲ್ ರಖಮಿನ ತೇಗದಪೋಲ್‌ಯಾನೆ ಕೂಚಗಳಿಗೆ ಚಿಲ್ಲರೆ ಮಾರಾಟದ ದರವು, 1895ನೇ ಇಸವಿ ಡಿಸೆಂಬರ್ ಗುರ್ಯೇ ತಾರೀಖು ಲಾಗಾಯತು ಅದರಡಿ ಕಂಡಂತೆ ಜಾಸ್ತಿ ಮಾಡಲ್ಪಟ್ಟಿರುತ್ತೆ.

ಡಿಪೋಗಳ ಹೆಸರು.	ತಪ್ಯೀಲ್.	ರಖಂ.	ಚಿಲ್ಲರೆ ಮಾರಾಟ ದರ ಸಲೆ ಅಡಿ 1ಕ್ಕೆ. ಇಂದ.			ದರ ಸಲೆ ಅಡಿ 1ಕ್ಕೆ ದರ. ಗೆ.		
ಉಬ್ರಾಣಿ ..	ತೇಗದ ಕೂಚಗಳು ನಾಲ್ಕು ಸಲೆ ಅಡಿ ವರಿಗೆ ..	ಅವ್ವಲ್	0	8	0	0	10	0
	ಡಿಟೋ ನಾಲ್ಕು ಅಡಿಯೀಂದ ಎಂಟು ಅಡಿ ವರಿಗೆ ..	ಡಿಟೋ	0	10	0	0	12	0
ಚನ್ನಗಿರಿ ..	ಡಿಟೋ ಎಂಟು ಅಡಿಯಿಂದ 12 ಅಡಿ ವರಿಗೆ	ಡಿಟೋ	0	12	0	0	14	0

ತಾರೀಖು 5ನೇ ಮಾರ್ಚಿ 1896.

ನಂ. 7993.—ರೆ. 3113.—ಮೈಸೂರ್ ಸರ್ವಿಸ್ ರೆಗ್ಯುಲೇಷನ್ 173ನೇ ಆರ್ಟಿಕಲ್ ಅನುಸರಿಸಿ, ತುಮಕೂರು ಡಿಸ್ಟ್ರಿಕ್ಟು ಯಕಸನ್ಟು ಅಸಿಸ್ಟೆಂಟ್ ಕಮ್ಮಿಷನರಾದ ಮೆಸ್ಟರ್ ವಿ. ಶ್ರೀನಿವಾಸಾಚಾರ್ಲು ಯವರಿಗೆ, 1896ನೇ ಇಸವಿ ಮಾರ್ಚಿ 9ನೇ ಮಕ್ಕುಂ ಲಾಗಾಯತು ಯಾ ಅವರು ಉಪಯೋಗಿಸಿಕೊಂಡ ತಾರೀಖು ವೊದಲು 15 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 7899.—ರೆ. 3078.—ಶ್ರೀರಂಗಪಟ್ಟಣದ ತಾಲ್ಲೂಕು ಡಿಪ್ಯುಟಿ ಅಮಲ್ದಾರ್ ಡಿ. ಸುಬ್ಬರಾಯರು ಎ. ಕೃಷ್ಣೀಅಸನವರು ರಜಾದ ಮೇಲೆ ಇರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ಯಡತೊರೆ ತಾಲ್ಲೂಕು ಅಮಲ್ದಾರ್ ವ 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ಕಾಯಂ ವುದ್ಯೋಗಸ್ಥರು ಇತರ ಕೆಲಸದ ಮೇಲಿರುವ ಕಾಲದಲ್ಲಿ ಅಥವಾ ಇನ್ನೊಂದು ಹುಕುಂ ಕೊಡುವ ಪರಿಯಂತ ಮೈಸೂರು ಡಿಸ್ಟ್ರಿಕ್ಟು ಆಫಿಸ್ ರೆವಿನ್ಯೂ ಹೆಡ್ ಅಕ್ಕೌಂಟೆಂಟ್ ಡಿ. ಸುಬ್ಬರಾಯರು, ಶ್ರೀರಂಗಪಟ್ಟಣದ ತಾಲ್ಲೂಕು ಡಿಪ್ಯುಟಿ ಅಮಲ್ದಾರ್ ಮತ್ತು 3ನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡುವಂತೆ ವೊಕರರ್ ಮಾಡಲ್ಪಟ್ಟಿರುತ್ತಾರೆ.

ತಾರೀಖು 27ನೇ ಫಿಬ್ರವರಿ 1896.

ನಂ. 7839.—ರೆ. 362.—ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮೆಸ್ಟರ್ ಕೆ. ಎಸ್. ಚಂದ್ರಶೇಖರಯ್ಯರವರಿಗೆ, 1895ನೇ ಇಸವಿ ಡಿಸೆಂಬರ್ 17ನೇ ಮಕ್ಕುಂ 5614 ರೆವಿನ್ಯೂ 2190ನೇ ನಂಬರು ಇಸ್ತಿಹಾರ್‌ನಾಮೆಯಲ್ಲಿ ಕೊಡಲ್ಪಟ್ಟ 1 ತಿಂಗಳೂ 25 ದಿವಸಗಳ ಪ್ರಿವಿಲೀಜ್ ರಜಾವನ್ನ ಅವರು, 1896ನೇ ಇಸವಿ ಜನವರಿ 2ನೇ ಮಕ್ಕುಮಿನ ಮಧ್ಯಾನ್ಹಾತ್ಪರ ಉಪಯೋಗಿಸಿಕೊಂಡು, 1896ನೇ ಇಸವಿ ಫಿಬ್ರವರಿ 13ನೇ ಮಕ್ಕುಮಿನ ಪೂರ್ವಾನ್ಹದಲ್ಲಿ ಮರಳಿ ಕೆಲಸದ ಮೇಲೆ ಹಾಜರಾಗಿರುತ್ತಾರಾಗಿ ರಜಾ ಪೈಕಿ ವುಳಿದ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ಹುಕುಂ ಬವೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಟೆರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷನ್.

ನಂ. 1067. ತಾರೀಖು 5ನೇ ಮಾರ್ಚಿ 1896, ಬೆಂಗಳೂರು.

ಬೆಂಗಳೂರು ಷಹರಿನಲ್ಲಿರುವ ಮುಜರಾಯಿ ವಿಚಾರಣೆಗೆ ವಳಪಟ್ಟ ಧರ್ಮರಾಯ ದೇವಸ್ಥಾನಕ್ಕೆ ವೊಕರರಾಗಿರುವ ಧರ್ಮದರ್ಶಿಗಳ ಪೈಕಿ ಬಹಳ ಜೈಫಿಯಾದ ಯಜಮಾನ ಮುನಿಶಾಮಪ್ಪನವರಿಗೆ ಬದಲಾಗಿ ಆತನ ಮಗ ಅಲರಾಜಪ್ಪನ ಸುಬ್ಬಾಯಪ್ಪನವರನ್ನ ಧರ್ಮದರ್ಶಿಯಾಗಿ ನೇಮಿಸಿ ಇಧೆ.

ಎ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂ. ಅಂಡ್ ಸೆಕ್ರಟೆರಿ.